ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ ಅವ್ಯಕ್ತ ಮುರಳಿ 20-03-2004

# *ಈ ವರ್ಷವನ್ನು ವಿಶೇಷ ಜೀವನ್ಮುಕ್ತ ವರ್ಷವನ್ನಾಗಿ ಆಚರಿಸಿಕೊಳ್ಳಿರಿ ಏಕತೆ ಮತ್ತು ಏಕಾಗ್ರತೆಯ ಮೂಲಕ ತಂದೆಯನ್ನು ಪ್ರತ್ಯಕ್ಷ ಮಾಡಿರಿ.*

(इस वर्ष को विशेष जीवनमुक्त वर्ष के रूप में मनाओ, एकता और एकाग्रता से बाप की प्रत्यक्षता करो)

ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ  ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

ಇಂದು ಸ್ನೇಹಸಾಗರನಾದ ತಂದೆಯು ನಾಲ್ಕಾರೂ ಕಡೆಯ ಸ್ನೇಹೀ ಮಕ್ಕಳನ್ನು ನೋಡುತ್ತಿದ್ದಾರೆ. ತಂದೆಗೂ ಸಹ ಹೃದಯದ ಅವಿನಾಶಿ ಸ್ನೇಹವಿದೆ ಮತ್ತು ಮಕ್ಕಳಿಗೂ ಹೃದಯರಾಮ ತಂದೆಯೊಂದಿಗೆ ಹೃದಯದ ಸ್ನೇಹವಿದೆ. ಈ ಪರಮಾತ್ಮ ಸ್ನೇಹ, ಹೃದಯದ ಸ್ನೇಹವನ್ನು ಕೇವಲ ತಂದೆ ಮತ್ತು ಬ್ರಾಹ್ಮಣ ಮಕ್ಕಳೇ ಅರಿತುಕೊಂಡಿದ್ದೀರಿ. ಕೇವಲ ತಾವು ಬ್ರಾಹ್ಮಣ ಆತ್ಮರೇ ಪರಮಾತ್ಮನ ಸ್ನೇಹಕ್ಕೆ ಪಾತ್ರರಾಗಿದ್ದೀರಿ. ಭಕ್ತಾತ್ಮರು ಪರಮಾತ್ಮನ ಪ್ರೀತಿಗಾಗಿ ಬಾಯಾರಿದ್ದಾರೆ, ಕೂಗುತ್ತಾರೆ. ತಾವು ಭಾಗ್ಯವಂತ ಬ್ರಾಹ್ಮಣ ಆತ್ಮರು ಅಂತಹ ಪ್ರೀತಿಗೆ ಪಾತ್ರರಾಗಿದ್ದೀರಿ. ಮಕ್ಕಳಿಗೆ ಏಕೆ ವಿಶೇಷ ಪ್ರೀತಿಯಿದೆ ಎಂಬುದು ಬಾಪ್‌ದಾದಾರವರಿಗೂ ತಿಳಿದಿದೆ ಏಕೆಂದರೆ ಈ ಸಮಯದಲ್ಲಿಯೇ ಸರ್ವಖಜಾನೆಗಳ ಮಾಲೀಕನ ಮೂಲಕ ಸರ್ವಖಜಾನೆಗಳೂ ಪ್ರಾಪ್ತವಾಗುತ್ತವೆ. ಆ ಖಜಾನೆಗಳು ಕೇವಲ ಈಗಿನ ಒಂದು ಜನ್ಮಕ್ಕಷ್ಟೇ ನಡೆಯುವುದಿಲ್ಲ ಆದರೆ ಅನೇಕ ಜನ್ಮಗಳವರೆಗೆ ಅವಿನಾಶಿ ಖಜಾನೆಗಳು ತಮ್ಮ ಜೊತೆ ಇರುತ್ತವೆ. ತಾವೆಲ್ಲಾ ಬ್ರಾಹ್ಮಣ ಆತ್ಮರು ಪ್ರಪಂಚದವರ ತರಹ ಬರಿಗೈಯಲ್ಲಿ ಹೋಗುವುದಿಲ್ಲ, ಸರ್ವಖಜಾನೆಗಳು

ಜೊತೆಯಿರುತ್ತವೆ. ಅಂದಾಗ ಇಂತಹ ಅವಿನಾಶಿ ಖಜಾನೆಗಳ ಪ್ರಾಪ್ತಿಯ ನಶೆಯಿರುತ್ತದೆಯಲ್ಲವೆ! ಮತ್ತು ಎಲ್ಲಾ ಮಕ್ಕಳು ಅವಿನಾಶಿ ಖಜಾನೆಗಳನ್ನು ಜಮಾ ಮಾಡಿಕೊಂಡಿದ್ದೀರಲ್ಲವೆ! ಜಮಾದ ನಶೆ, ಜಮಾದ ಖುಷಿಯು ಸದಾ ಇರುತ್ತದೆ, ಪ್ರತಿಯೊಬ್ಬರ ಚಹರೆಯಲ್ಲಿ ಜಮಾದ ಹೊಳಪು ಕಂಡುಬರುತ್ತದೆ. ಯಾವ ಖಜಾನೆಗಳು ತಂದೆಯ ಮೂಲಕ ಪ್ರಾಪ್ತಿಯಾಗಿವೆ  ಎಂದು ತಿಳಿದಿದೆಯಲ್ಲವೆ. ಎಂದಾದರೂ ತಮ್ಮ ಜಮಾದ ಖಾತೆಯನ್ನು ಪರಿಶೀಲನೆ ಮಾಡುತ್ತೀರಾ? ತಂದೆಯಂತೂ ಎಲ್ಲಾ ಮಕ್ಕಳಿಗೆ ಪ್ರತಿಯೊಂದು ಖಜಾನೆಯನ್ನು ಅಖಂಡವಾಗಿ ಕೊಡುತ್ತಾರೆ. ಕೆಲವರಿಗೆ ಸ್ವಲ್ಪ, ಕೆಲವರಿಗೆ ಹೆಚ್ಚಾಗಿ ಕೊಡುವುದಿಲ್ಲ. ಪ್ರತಿಯೊಂದು ಮಗು ಅಪಾರ, ಅಖಂಡ, ಅವಿನಾಶಿ ಖಜಾನೆಗಳಿಗೆ ಮಾಲೀಕರಾಗಿದ್ದಾರೆ. ಬಾಲಕರಾಗುವುದು ಎಂದರೆ ಖಜಾನೆಗಳ ಮಾಲೀಕರಾಗುವುದು ಅಂದಾಗ  ಬಾಪ್‌ದಾದಾರವರು ಎಷ್ಟೊಂದು ಖಜಾನೆಗಳನ್ನು ಕೊಟ್ಟಿದ್ದಾರೆ ಎಂದು ನೋಡಿಕೊಳ್ಳಿರಿ!

ಎಲ್ಲದಕ್ಕಿಂತ ಮೊದಲ ಖಜಾನೆಯು ಜ್ಞಾನಧನವಾಗಿದೆ. ಅಂದಾಗ ಎಲ್ಲರಿಗೆ ಜ್ಞಾನಧನವು ಸಿಕ್ಕಿದೆಯೆ? ಸಿಕ್ಕಿದೆಯೋ ಅಥವಾ ಸಿಗಬೇಕಾಗಿದೆಯೋ? ಒಳ್ಳೆಯದು- ಜಮಾ ಆಗಿದೆಯೆ? ಅಥವಾ ಸ್ವಲ್ಪವೇ ಜಮಾ ಆಗಿದೆ, ಇನ್ನೂ ಸ್ವಲ್ಪ ಹೊರಟುಹೋಗಿದೆಯೋ? ಜ್ಞಾನಧನ ಅರ್ಥಾತ್ ಬುದ್ಧಿವಂತರಾಗಿ, ತ್ರಿಕಾಲದರ್ಶಿಗಳಾಗಿ ಕರ್ಮಮಾಡುವುದಾಗಿದೆ, ಜ್ಞಾನಪೂರ್ಣರಾಗುವುದಾಗಿದೆ. ಪೂರ್ಣಜ್ಞಾನ ಮತ್ತು ಮೂರೂಕಾಲಗಳ ಜ್ಞಾನವನ್ನರಿತು ಜ್ಞಾನಧನವನ್ನು ಕಾರ್ಯದಲ್ಲಿ ತೊಡಗಿಸಬೇಕು. ಈ ಜ್ಞಾನದ ಖಜಾನೆಯಿಂದ ಪ್ರತ್ಯಕ್ಷಜೀವನದಲ್ಲಿ ಪ್ರತೀ ಕಾರ್ಯದಲ್ಲಿ ಉಪಯೋಗಿಸುವುದರಿಂದ ವಿಧಿಯಿಂದ ಸಿದ್ಧಿಯು ಪ್ರಾಪ್ತಿಯಾಗುತ್ತದೆ, ಕೆಲವು ಬಂಧನಗಳಿಂದ ಮುಕ್ತಿ ಮತ್ತು ಜೀವನ್ಮುಕ್ತಿಯು ಸಿಗುತ್ತದೆ. ಅನುಭವ ಮಾಡುತ್ತೀರಾ? ಜೀವನ್ಮುಕ್ತಿಯು ಸತ್ಯಯುಗದಲ್ಲಿ ಸಿಗುತ್ತದೆ ಎಂದಲ್ಲ ಈಗಲೂ ಸಹ ಈ ಸಂಗಮದ ಜೀವನದಲ್ಲಿಯೂ ಅನೇಕ ಕ್ಷಣಿಕ ಬಂಧನಗಳಿಂದ ಮುಕ್ತಿ ಸಿಕ್ಕಿಬಿಡುತ್ತದೆ. ಜೀವನವು ಬಂಧನಮುಕ್ತವಾಗಿಬಿಡುತ್ತದೆ. ಎಷ್ಟೊಂದು ಬಂಧನಗಳಿಂದ ಮುಕ್ತರಾಗಿಬಿಟ್ಟಿದ್ದೀರಿ! ಎಷ್ಟು ಪ್ರಕಾರದ ಹಾ! ಹಾ! ಕಾರಗಳಿಂದ(ದುಃಖ) ಮುಕ್ತರಾಗಿದ್ದೀರೆಂದು ತಿಳಿದಿದೆಯಲ್ಲವೆ! ಮತ್ತು ಸದಾ ಹಾ! ಹಾ! ಕಾರಗಳ ಸಮಾಪ್ತಿ, ವಾಹ್! ವಾಹ್!ನ ಗೀತೆಯನ್ನು ಹಾಡುತ್ತಿರುತ್ತೀರಿ. ಒಂದುವೇಳೆ ಯಾವುದೇ ಮಾತಿನಲ್ಲಿ ಅಂಶಮಾತ್ರವೂ ಕೇವಲ ಮುಖದಿಂದಲ್ಲ, ಸಂಕಲ್ಪಮಾತ್ರವೂ, ಸ್ವಪ್ನ ಮಾತ್ರದಿಂದಲೂ ಸಹ ಹಾ! ಹಾ! ಕಾರಗಳು ಮನಸ್ಸಿನಲ್ಲಿ ಬಂದಿತೆಂದರೆ ಜೀವನ್ಮುಕ್ತರಲ್ಲ. ವಾಹ್! ವಾಹ್! ವಾಹ್! ಈ ರೀತಿಯಿದ್ದೀರಾ! ಮಾತೆಯರೇ ಹಾ! ಹಾ! ಎನ್ನುವುದಿಲ್ಲ ತಾನೆ? ಇಲ್ಲ ತಾನೆ? ಒಮ್ಮೊಮ್ಮೆ ಮಾಡುತ್ತೀರಾ? ಪಾಂಡವರು ಮಾಡುತ್ತಾರೆ. ಭಲೆ ಮುಖದಿಂದ ಮಾಡಬೇಡಿ ಆದರೆ ಮನಸ್ಸಿನಲ್ಲಿ ಸಂಕಲ್ಪಮಾತ್ರದಲ್ಲಿಯೂ ಸಹ ಒಂದುವೇಳೆ ಯಾವುದೇ ಮಾತಿನಲ್ಲಿ ಹಾ! ಇದೆಯೆಂದರೆ ಫ್ಲೈ (ಹಾರುವುದು) ಇಲ್ಲ. ಹಾ! ಎಂದರೆ ಬಂಧನ ಮತ್ತು ಫ್ಲೈ ಎಂದರೆ ಹಾರುವಕಲೆ ಆರ್ಥಾತ್ ಜೀವನ್ಮುಕ್ತ, ಬಂಧನಮುಕ್ತ ಸ್ಥಿತಿಯಾಗಿದೆ. ಅಂದಾಗ ಪರಿಶೀಲನೆ ಮಾಡಿಕೊಳ್ಳಿರಿ ಏಕೆಂದರೆ **ಬ್ರಾಹ್ಮಣ ಆತ್ಮರು ಎಲ್ಲಿಯವರೆಗೆ ಸ್ವಯಂ ಬಂಧನಮುಕ್ತರಾಗಿಲ್ಲವೋ, ಯಾವುದೇ ಚಿನ್ನದ ಅಥವಾ ವಜ್ರದ ರಾಯಲ್ ಬಂಧನದ ಸೂತ್ರದಿಂದ ಬಂಧಿಸಲ್ಪಟ್ಟಿರುತ್ತೀರೋ ಅಲ್ಲಿಯವರೆಗೆ ಸರ್ವಾತ್ಮರಿಗಾಗಿ ಮುಕ್ತಿಯ ದ್ವಾರವು ತೆರೆಯಲು ಸಾಧ್ಯವಿಲ್ಲ. ತಾವು ಬಂಧನಮುಕ್ತರಾಗುವುದರಿಂದ ಸರ್ವಾತ್ಮರಿಗಾಗಿ ಮುಕ್ತಿಯ ದ್ವಾರವು ತೆರೆಯುತ್ತದೆ. ಆದ್ದರಿಂದ ದ್ವಾರವನ್ನು ತೆರೆಯುವ ಹಾಗೂ ಸರ್ವಾತ್ಮರು ದುಃಖ, ಅಶಾಂತಿಯಿಂದ ಮುಕ್ತರಾಗುವ ಜವಾಬ್ದಾರಿಯು ತಮ್ಮ ಮೇಲಿದೆ.**

ಆದ್ದರಿಂದ ಪರಿಶೀಲನೆ ಮಾಡಿಕೊಳ್ಳಿರಿ - ಎಲ್ಲಿಯವರೆಗೆ ನಮ್ಮ ಜವಾಬ್ದಾರಿಯನ್ನು ನಿಭಾಯಿಸಿದ್ದೇವೆ? ತಾವೆಲ್ಲರೂ ಬಾಪ್‌ದಾದಾರವರ ಜೊತೆ ವಿಶ್ವಪರಿವರ್ತನೆಯ ಕಾರ್ಯವನ್ನು ಮಾಡುವ ಜವಾಬ್ದಾರಿಯನ್ನು ಪಡೆದಿದ್ದೀರಿ. ಗುತ್ತಿಗೆದಾರರು, ಜವಾಬ್ದಾರರೂ ಆಗಿದ್ದೀರಿ. ಒಂದುವೇಳೆ ತಂದೆಯು ಮಾಡಬೇಕೆಂದುಕೊಂಡರೆ ಏನನ್ನಾದರೂ ಮಾಡಬಲ್ಲರು. ಆದರೆ ತಂದೆಗೆ ಮಕ್ಕಳೊಂದಿಗೆ ಪ್ರೀತಿಯಿದೆ. ತಾವೊಬ್ಬರೇ ಮಾಡಲು ಇಚ್ಛಿಸುವುದಿಲ್ಲ. ತಾವು ಸರ್ವಮಕ್ಕಳನ್ನು ತಂದೆಯು ಅವತರಿತರಾಗುತ್ತಿದ್ದಂತೆಯೇ ಜೊತೆಯಲ್ಲಿಯೇ ಅವತರಿತರನ್ನಾಗಿ ಮಾಡಿದ್ದೇವೆ. ಶಿವರಾತ್ರಿಯನ್ನು ಆಚರಿಸಿದರಲ್ಲವೆ! ಅಂದಾಗ ಯಾರದನ್ನು ಆಚರಿಸಿದಿರಿ? ಕೇವಲ ಬಾಪ್‌ದಾದಾರವರದೇ? ತಮ್ಮೆಲ್ಲರದೂ ಆಚರಿಸಿದ್ದಿರಲ್ಲವೇ? ತಂದೆಗೆ ಆದಿಯಿಂದ ಅಂತ್ಯದವರೆಗಿನ ಜೊತೆಗಾರರಾಗಿದ್ದೀರಿ. ಆದಿಯಿಂದ ಅಂತ್ಯದವರೆಗೆ ಜೊತೆಗಾರರಾಗಿದ್ದೇವೆ ಎಂಬ ನಶೆಯಿದೆಯೇ? ತಾವು ಭಗವಂತನ ಜೊತೆಗಾರರಾಗಿದ್ದೀರಿ. ಅಂದಮೇಲೆ ಬಾಪ್‌ದಾದಾ ಈಗ ಈ ವರ್ಷದ ಸೀಜನ್ನಿನ ಅಂತ್ಯದ ಪಾತ್ರವನ್ನಭಿನಯಿಸುವುದರಲ್ಲಿ ಎಲ್ಲಾ ಮಕ್ಕಳಿಂದ ಇದನ್ನನೇ ಬಯಸುತ್ತಾರೆ. ಅದೇನೆಂದು ತಿಳಿಸುವುದೇ? ಅದನ್ನು ಮಾಡಲೇಬೇಕಾಗುತ್ತದೆ. ಕೇವಲ ಕೇಳುವುದಲ್ಲ ಮಾಡಲೇಬೇಕಾಗುವುದು. ನಿಮಿತ್ತ ಟೀಚರ್ಸ್ ಸರಿಯೆ? ಟೀಚರ್ಸ್ ಕೈಯನ್ನೆತ್ತಿರಿ. ಟೀಚರ್ಸ್ ಶಕೆಯಿರುವ ಕಾರಣ ಬೀಸಣಿಕೆಗಳನ್ನು ಅಲುಗಾಡಿಸುತ್ತಿದ್ದಾರೆ. ಒಳ್ಳೆಯದು- ಎಲ್ಲಾ ನಿಮಿತ್ತ ಟೀಚರ್ಸ್ ಮಾಡುತ್ತೀರಿ ಮತ್ತು ಮಾಡಿಸುತ್ತೀರಾ? ಮಾಡಿಸುತ್ತೀರಾ, ಮಾಡುವಿರಾ? ಒಳ್ಳೆಯದು- ಸೆಖೆಯೂ ಆಗುತ್ತಿದೆ, ಕೈಯನ್ನೂ ಅಲುಗಾಡಿಸುತ್ತಿದ್ದಾರೆ, ದೃಶ್ಯವು ಬಹಳ ಚೆನ್ನಾಗಿದೆ. ಬಹಳ ಒಳ್ಳೆಯದು ಆದ್ದರಿಂದ ಬಾಪ್‌ದಾದಾ ಈ ಸೀಜನ್ನಿನ ಸಮಾಪ್ತಿ ಸಮಾರೋಹಣದಲ್ಲಿ ಒಂದು ಹೊಸ ಪ್ರಕಾರದ ದೀಪಮಾಲೆಯನ್ನಾಚರಿಸಲು ಬಯಸುತ್ತಾರೆ. ತಿಳಿಯಿತೆ! ಹೊಸಪ್ರಕಾರದ ದೀಪಮಾಲೆಯನ್ನಾಚರಿಸಲು ಇಚ್ಛಿಸುತ್ತೇವೆ ಹಾಗಾದರೆ ತಾವೆಲ್ಲರೂ ದೀಪಮಾಲೆಯನ್ನಾಚರಿಸಲು ತಯಾರಾಗಿದ್ದೀರಾ? ಯಾರು ತಯಾರಿದ್ದೀರೋ ಅವರು ಕೈಯನ್ನೆತ್ತಿರಿ. ಕೇವಲ ಹೌದು ಎಂದು ಹೇಳುವುದಲ್ಲ, ಬಾಪ್‌ದಾದಾರವರನ್ನು ಖುಷಿಪಡಿಸುವುದಕ್ಕಾಗಿ ಕೈಯನ್ನೆತ್ತುವುದಲ್ಲ ಹೃದಯಪೂರ್ವಕವಾಗಿ ಕೈಯನ್ನೆತ್ತಿರಿ. ಬಾಪ್‌ದಾದಾ ತಮ್ಮ ಹೃದಯದ ಆಸೆಗಳನ್ನು ಸಂಪನ್ನ ಮಾಡುವಂತಹ, ಬೆಳಗುತ್ತಿರುವ ದೀಪವನ್ನು ನೋಡಲು ಬಯಸುತ್ತಾರೆ. ಅಂದಾಗ ಬಾಪ್‌ದಾದಾರವರ ಆಸೆಗಳ ದೀಪ, ದೀಪಮಾಲೆಯನ್ನು ಆಚರಿಸಬಯಸುತ್ತೇವೆ. ಯಾವ ದೀಪಾವಳಿ ಎಂದು ತಿಳಿಯಿತೇ? ಸ್ಪಷ್ಟವಾಯಿತೇ? ಪಾಂಡವರು ತಿಳಿಯಿತೇ?

ಬಾಪ್‌ದಾದಾರವರ ಆಸೆಗಳ ದೀಪ ಯಾವುದಾಗಿದೆ? ಹಿಂದಿನ ವರ್ಷದಿಂದ ಹಿಡಿದು ಈ ವರ್ಷದವರೆಗೆ ಸೀಜನ್ ಮುಕ್ತಾಯವಾಯಿತು. ಬಾಪ್‌ದಾದಾ ತಿಳಿಸಿದರು – ತಾವೆಲ್ಲರೂ ಸಂಕಲ್ಪ ಮಾಡಿದ್ದಿರಿ, ನೆನಪಿದೆಯೆ? ಕೆಲವರು ಆ ಸಂಕಲ್ಪವನ್ನು ಕೇವಲ ಸಂಕಲ್ಪದವರೆಗೆ ಪೂರ್ಣ ಮಾಡಿದ್ದೀರಿ, ಇನ್ನೂ ಕೆಲವರು ಆ ಸಂಕಲ್ಪವನ್ನು ಅರ್ಧದಷ್ಟು ಪೂರ್ಣ ಮಾಡಿದ್ದೀರಿ. ಇನ್ನೂ ಕೆಲವರು ಯೋಚಿಸುತ್ತೀರಿ ಆದರೆ ಆ ಯೋಚನೆಯು ಯೋಚನೆಗಷ್ಟೇ ಸೀಮಿತವಾಗಿದೆ. ಆ ಸಂಕಲ್ಪವೇನು? ಹೊಸ ಮಾತೇನಲ್ಲ, ಹಳೆಯ ಮಾತೇ ಆಗಿದೆ - ಸ್ವ-ಪರಿವರ್ತನೆಯಿಂದ ಸರ್ವರ ಪರಿವರ್ತನೆ. ವಿಶ್ವದ ಮಾತನ್ನಂತೂ ಬಿಡಿ ಆದರೆ ಬಾಪ್‌ದಾದಾರವರು ಸ್ವ-ಪರಿವರ್ತನೆಯಿಂದ ಬ್ರಾಹ್ಮಣ ಪರಿವಾರದ ಪರಿವರ್ತನೆಯನ್ನು ನೋಡಬಯಸುತ್ತಾರೆ. ಈಗ ಇದನ್ನು ಕೇಳಲು ಇಷ್ಟವಿಲ್ಲ ಅವರು ಈ ರೀತಿಯಿದ್ದರೆ ಇದಾಗುತ್ತದೆ, ಇವರು ಬದಲಾದರೆ ನಾನೂ ಬದಲಾಗುವೆನು, ಇವರು ಮಾಡಿದರೆ ನಾನು ಮಾಡುವೆನು. ಇದರಲ್ಲಿ ವಿಶೇಷವಾಗಿ ಪ್ರತಿಯೊಂದು ಮಗುವಿಗೆ

ಬ್ರಹ್ಮಾತಂದೆಯು ವಿಶೇಷವಾಗಿ ತಿಳಿಸುತ್ತಿದ್ದಾರೆ - ಹೇ ಅರ್ಜುನರೇ, ನನ್ನ ಸಮಾನರಾಗಿ. ಇದರಲ್ಲಿ ಮೊದಲು ನಾನು ಎನ್ನಬೇಕು, ಇವರು ಮೊದಲು ಎನ್ನುವುದಲ್ಲ. ಈ ನಾನು ಕಲ್ಯಾಣಕಾರಿ ನಾನು ಎಂಬುದಾಗಿದೆ. ಬಾಕಿ ಮಿತವಾದ ನಾನು ಎಂಬುದು ಕೆಳಗೆ ಬೀಳಿಸುತ್ತದೆ. ಇದರಲ್ಲಿ ಒಂದು ಗಾದೆ ಮಾತೂ ಇದೆ ಓಟೇ ಸೋ ಅರ್ಜುನ್ (ನಂಬರ್ವನ್ ಆಗಿ) ಅಂದಾಗ ಅರ್ಜುನರು ಎಂದರೆ ನಂಬರ್‌ವನ್, ನಂಬರ್‌ವಾರ್ ಅಲ್ಲ ನಂಬರ್‌ವನ್. ಅಂದಾಗ ತಾವು ಎರಡನೇ ನಂಬರಿನವರಾಗಲು ಇಚ್ಛಿಸುತ್ತೀರೋ ಅಥವಾ ನಂಬರ್‌ವನ್ ಆಗಬಯಸುತ್ತೀರೋ? ಕೆಲವೊಂದು ಕಾರ್ಯದಲ್ಲಿ ಬಾಪ್‌ದಾದಾ ಹಾಸ್ಯದ ಮಾತನ್ನು ನೋಡಿದರು, ಪರಿವಾರದ ಮಾತನ್ನು ತಿಳಿಸುತ್ತೇವೆ ಏಕೆಂದರೆ ಪರಿವಾರದವರೇ ಕುಳಿತಿದ್ದೀರಲ್ಲವೇ. ಬಾಪ್‌ದಾದಾರವರ ಬಳಿ ಸಮಾಚಾರಗಳು ಬರುತ್ತವೆ ಕೆಲವು ಇಂತಹ ಕಾರ್ಯಕ್ರಮಗಳು ಆಗುತ್ತವೆ, ಅದು ವಿಶೇಷಾತ್ಮರ ನಿಮಿತ್ತವಾಗಿರುತ್ತದೆ. ಅಂದಾಗ ಬಾಪ್‌ದಾದಾರವರ ಬಳಿ, ದಾದಿಯರ ಬಳಿ ಸಮಾಚಾರವು ಬರುತ್ತದೆ ಏಕೆಂದರೆ ಸಾಕಾರದಲ್ಲಂತೂ ದಾದಿಯರಿದ್ದಾರೆ. ಬಾಪ್‌ದಾದಾರವರ ಬಳಿಯಂತೂ ಸಂಕಲ್ಪವು ತಲುಪುತ್ತದೆ, ಯಾವ ಸಂಕಲ್ಪ? ಇದರಲ್ಲಿ ನನ್ನ ಹೆಸರೂ ಇರಬೇಕು. ನಾನೇನು ಕಡಿಮೆ? ನನ್ನ ಹೆಸರು ಏಕೆ ಇಲ್ಲ? ಆದ್ದರಿಂದ ತಂದೆಯು ತಿಳಿಸುತ್ತಾರೆ - ನಂಬರ್‌ವಾರ್ ಆಗುವುದರಲ್ಲಿ ತಮ್ಮ ಹೆಸರು ಏಕಿಲ್ಲ! ಇರಬೇಕಲ್ಲವೆ! ಅಥವಾ ಇರಬಾರದೋ? ಇರಬೇಕಲ್ಲವೆ. ಸನ್ಮುಖದವರು ಕುಳಿತಿದ್ದೀರಿ, ಮಹಾರಥಿಗಳು ಕುಳಿತಿದ್ದೀರಿ, ಇರಬೇಕಲ್ಲವೆ! ಇರಬೇಕೇ! ಅಂದಾಗ ಬ್ರಹ್ಮಾ ತಂದೆಯು ಏನನ್ನು ಮಾಡಿತೋರಿಸಿದರೋ, ಇವರು ಹೀಗೆ ಮಾಡುತ್ತಾರೆ, ಅವರು ಮಾಡುವುದಿಲ್ಲ ಎಂದು ಯಾರನ್ನೂ ನೋಡಲಿಲ್ಲ. ಮೊದಲು ನಾನು ಎಂದರು. ಈ ನಾನು ಎನ್ನುವುದರಲ್ಲಿ ಯಾವುದನ್ನು ಮೊದಲು ತಿಳಿಸಿದ್ದೆವೋ ಆ ಅನೇಕ ಪ್ರಕಾರದ ರಾಯಲ್ ರೂಪದ ನಾನು ಸಮಾಪ್ತಿಯಾಗಿಬಿಡುತ್ತದೆ. ಅಂದಾಗ ಬಾಪ್‌ದಾದಾರವರ ಈ ಸೀಜನ್ನಿನ ಸಮಾಪ್ತಿಯ ಆಸೆ ಇದಾಗಿದೆ. ಪ್ರತಿಯೊಂದು ಮಗು ಅಂದರೆ ಯಾರು ಬ್ರಹ್ಮಾಕುಮಾರ-ಬ್ರಹ್ಮಾಕುಮಾರಿ ಎಂದು ಕರೆಯಿಸಿಕೊಳ್ಳುತ್ತಾರೆ, ತಿಳಿದುಕೊಂಡಿದ್ದಾರೆ, ಒಪ್ಪುತ್ತಾರೆಯೋ ಆ ಪ್ರತಿಯೊಂದು ಬ್ರಾಹ್ಮಣ ಆತ್ಮವು ಯಾವುದೆಲ್ಲಾ ಸಂಕಲ್ಪ ರೂಪದಲ್ಲಿಯೂ ಹದ್ದಿನ ಬಂಧನವಿದ್ದರೆ ಆ ಬಂಧನಗಳಿಂದ ಮುಕ್ತರಾಗಿ ಬ್ರಹ್ಮಾತಂದೆಯ ಸಮಾನ ಬಂಧನಮುಕ್ತ, ಜೀವನ್ಮುಕ್ತ. ಬ್ರಾಹ್ಮಣ ಜೀವನ್ಮುಕ್ತ, ಸಾಧಾರಣ ಜೀವನ್ಮುಕ್ತರಲ್ಲ. ಬ್ರಾಹ್ಮಣ ಶ್ರೇಷ್ಠ ಜೀವನ್ಮುಕ್ತಿಯ ಈ ವಿಶೇಷ ವರ್ಷವನ್ನಾಚರಿಸಿ ಪ್ರತಿಯೊಂದು ಆತ್ಮವೂ ಎಷ್ಟು ತಮ್ಮ ಸೂಕ್ಷ್ಮ ಬಂಧನಗಳನ್ನು ಅರಿತುಕೊಂಡಿದ್ದೀರೋ ಅಷ್ಟು ಬೇರೆಯವರು ಅರಿತುಕೊಳ್ಳಲು ಸಾಧ್ಯವಿಲ್ಲ. ಬಾಪ್‌ದಾದಾರವರಿಗಂತೂ ಗೊತ್ತಿದೆ ಏಕೆಂದರೆ ಬಾಪ್‌ದಾದಾರವರ ಬಳಿ ದೂರದರ್ಶನವೂ ಇದೆ. ಮನಸ್ಸಿನ ದೂರದರ್ಶನವಿದೆ, ಶರೀರದ ದೂರದರ್ಶನವಲ್ಲ. ಅಂದಾಗ ಈಗ ಪುನಃ ಬಾಪ್‌ದಾದಾರವರ ಯಾವ ಸೀಜನ್ ಇರುವುದೋ, ಸೀಜನ್ನಂತೂ ಇರುತ್ತದೆಯಲ್ಲವೇ ಅಥವಾ ರಜೆ ಕೊಡುವುದೇ? (ಬಾಪ್‌ದಾದಾ ಬರುವುದನ್ನು ನಿಲ್ಲಿಸುವುದು) ಒಂದುವರ್ಷ ರಜೆ ಕೊಡುವುದೇ? ರಜೆ ಕೊಡುವುದೇ? ಒಂದುವರ್ಷವಾದರೂ ರಜೆ ಇರಬೇಕಲ್ಲವೆ? ಅಥವಾ ಇರಬಾರದೋ? ಪಾಂಡವರೇ, ಒಂದುವರ್ಷದ ರಜೆ ಕೊಡುವುದೇ? (ದಾದೀಜಿಯವರು ಹೇಳುತ್ತಿದ್ದಾರೆ - ತಿಂಗಳಿನಲ್ಲಿ 15 ದಿನಗಳ ರಜೆ) ಒಳ್ಳೆಯದು- ಬಹಳ ಒಳ್ಳೆಯದು, ಎಲ್ಲರೂ ಹೇಳುತ್ತಾರೆ. ಯಾರು ರಜೆ ಬೇಡವೆಂದು ಹೇಳುತ್ತೀರೋ ಅವರು ಕೈಯನ್ನೆತ್ತಿರಿ. ಮೇಲೆ ಕುಳಿತಿರುವವರು ಕೈಯನ್ನು ಅಲುಗಾಡಿಸುತ್ತಿಲ್ಲ. ತಂದೆಯಂತೂ ಸದಾ ಮಕ್ಕಳಿಗೆ ಪ್ರತಿಯೊಂದು ಮಾತಿನಲ್ಲಿ ಹಾಂಜೀ (ಆಯಿತು) ಎಂದು ಹೇಳುತ್ತಾರೆ. ಈಗ ತಂದೆಗೆ ಮಕ್ಕಳು ಯಾವಾಗ ಹಾಂಜಿ ಹೇಳುತ್ತೀರಿ! ತಂದೆಯಿಂದಂತೂ ಹಾಂಜಿ ಮಾಡಿಸಿಬಿಟ್ಟಿರಿ.

ಆದ್ದರಿಂದ ತಂದೆಯು ತಿಳಿಸುತ್ತಾರೆ ತಂದೆಯೂ ಸಹ ಒಂದು ನಿಭಂದನೆ ಹಾಕುತ್ತಾರೆ ಆ ನಿಭಂದನೆಯನ್ನು(ಶರತ್ತು) ಮಂಜೂರು(ಅಂಗೀಕಾರ) ಮಾಡುತ್ತೀರಾ? ಎಲ್ಲರೂ ಹಾಂಜೀ ಎಂದಾದರೂ ಹೇಳಿ. ಪಕ್ಕಾ? ಸ್ವಲ್ಪವೂ ಉದಾಸೀನ ಮಾಡುವುದಿಲ್ಲ ತಾನೆ? ಈಗ ದೂರದರ್ಶನದಲ್ಲಿ ಎಲ್ಲರ ಭಾವಚಿತ್ರಗಳನ್ನು ತೆಗೆಯಿರಿ. ಚೆನ್ನಾಗಿದೆ- ಎಲ್ಲಾ ಮಕ್ಕಳು ಹಾಂಜೀ, ಹಾಂಜೀ ಮಾಡುತ್ತಿರುವುದನ್ನು ನೋಡಿ ತಂದೆಗೂ ಖುಷಿಯಾಗುತ್ತದೆ.

ಆದ್ದರಿಂದ ಬಾಪ್‌ದಾದಾರವರು ಯಾವುದೇ ಕಾರಣವನ್ನು ಹೇಳದೇ ಇರುವುದನ್ನು ಇಷ್ಟಪಡುತ್ತಾರೆ, ಈ ಕಾರಣವಿದೆ, ಈ ಕಾರಣವಿದೆ, ಈ ಬಂಧನವಿದೆ! ಯಾವುದೇ ಸಮಸ್ಯೆ ಇರಬಾರದು, ಸಮಾಧಾನ ಸ್ವರೂಪರಾಗಬೇಕು ಹಾಗೂ ಜೊತೆಗಾರರನ್ನೂ ಮಾಡಬೇಕು ಏಕೆಂದರೆ ಸಮಯದ ಗತಿಯನ್ನು ನೀವು ನೋಡುತ್ತಿದ್ದೀರಿ. ಪ್ರಪಂಚದಲ್ಲಿ ಭ್ರಷ್ಟಾಚಾರದ ಮಾತು ಎಷ್ಟೊಂದು ಹೆಚ್ಚುತ್ತಿದೆ. ಭ್ರಷ್ಟಾಚಾರ, ಅತ್ಯಾಚಾರವು ಅತಿಯಲ್ಲಿ ಹೋಗುತ್ತಿದೆ. ಆದ್ದರಿಂದ ಶ್ರೇಷ್ಠಾಚಾರದ ಬಾವುಟವು ಪ್ರತಿಯೊಬ್ಬ ಬ್ರಾಹ್ಮಣ ಆತ್ಮನ ಮನಸ್ಸಿನಲ್ಲಿ ಹಾರಲಿ ಆಗ ವಿಶ್ವದಲ್ಲಿ ಹಾರಲ್ಪಡುತ್ತದೆ. ಎಷ್ಟೊಂದು ಶಿವರಾತ್ರಿಯನ್ನು ಆಚರಿಸಿದ್ದೀರಿ! ಪ್ರತಿಯೊಂದು ಶಿವರಾತ್ರಿಯಲ್ಲಿ ಇದೇ ಸಂಕಲ್ಪವನ್ನು ಮಾಡುತ್ತೀರಿ... ವಿಶ್ವದಲ್ಲಿ ತಂದೆಯ ಬಾವುಟವನ್ನು ಹಾರಿಸಬೇಕು. ವಿಶ್ವದಲ್ಲಿ ಪ್ರತ್ಯಕ್ಷತೆಯ ಬಾವುಟವನ್ನು ಹಾರಿಸುವ ಮೊದಲು ಪ್ರತಿಯೊಂದು ಬ್ರಾಹ್ಮಣರ ಮನಸ್ಸಿನ ಹೃದಯಸಿಂಹಾಸನದಲ್ಲಿ ಸದಾ ತಂದೆಯ ಬಾವುಟ ಹಾರಬೇಕಾಗುವುದು. ಇಂತಹ ಬಾವುಟವನ್ನು ಹಾರಿಸುವ ಸಲುವಾಗಿ ಕೇವಲ ಎರಡು ಶಬ್ಧವನ್ನು ಪ್ರತಿಯೊಂದು ಕರ್ಮದಲ್ಲಿ! ಸಂಕಲ್ಪಮಾತ್ರವಲ್ಲ, ಬುದ್ಧಿಮಾತ್ರವಲ್ಲ. ಹೃದಯದಲ್ಲಿ, ಕರ್ಮದಲ್ಲಿ, ಸಂಬಂಧದಲ್ಲಿ, ಸಂಪರ್ಕದಲ್ಲಿ ತರಬೇಕಾಗುವುದು. ಇದು ಕಷ್ಟದ ಶಬ್ಧವಲ್ಲ, ಇದು ಸಾಮಾನ್ಯ ಶಬ್ಧವಾಗಿದೆ. ಅದಾಗಿದೆ ಒಂದು ಸರ್ವ ಸಂಬಂಧದಲ್ಲಿ, ಸಂಪರ್ಕದಲ್ಲಿ ಏಕತೆ. ಅನೇಕ ಸಂಸ್ಕಾರವಿದ್ದರೂ ಸಹ ಅನೇಕತೆಯಲ್ಲಿ ಏಕತೆ. ಹಾಗೂ ಎರಡನೆಯದು ನೀವು ಯಾವ ಶ್ರೇಷ್ಠ ಸಂಕಲ್ಪವನ್ನು ಮಾಡುತ್ತೀರೋ ಬಾಪ್‌ದಾದಾರವರಿಗೆ ಅದು ಬಹಳ ಇಷ್ಟವಾಗುತ್ತದೆ, ನೀವು ಯಾವಾಗ ಸಂಕಲ್ಪ ಮಾಡುತ್ತೀರೋ ಆಗ ಬಾಪ್‌ದಾದಾರವರು ನೋಡಿ, ಕೇಳಿ ಈ ರೀತಿ ಬಹಳ ಖುಷಿಪಡುತ್ತಾರೆ - ವಾಹ್! ವಾಹ್! ಮಕ್ಕಳೇ ವಾಹ್! ವಾಹ್ ಶ್ರೇಷ್ಠ ಸಂಕಲ್ಪ ವಾಹ್! ಆದರೆ, ಆದರೆ..... ಬಂದುಬಿಡುತ್ತದೆ. ಇದು ಬರಬಾರದು ಆದರೆ ಬಂದುಬಿಡುತ್ತದೆ. ಮೆಜಾರಿಟಿ ಸಂಕಲ್ಪ, ಮೆಜಾರಿಟಿ ಅರ್ಥಾತ್ 90%, ಕೆಲವು ಮಕ್ಕಳು ತುಂಬಾ ಚೆನ್ನಾಗಿದ್ದಾರೆ, ಬಾಪ್‌ದಾದಾರವರೂ ಸಹ ತಿಳಿದುಕೊಳ್ಳುತ್ತಾರೆ ಇಂದು ಈ ಮಗುವಿನ ಸಂಕಲ್ಪ ಬಹಳ ಚೆನ್ನಾಗಿದೆ. ಉನ್ನತಿಯೂ ಆಗಿಬಿಡುತ್ತದೆ ಆದರೆ ಮಾತಿನಲ್ಲಿ ಬರುವ ವೇಳೆಗೆ ಅದು ಅರ್ಧದಷ್ಟು ಕಡಿಮೆ ಆಗುತ್ತದೆ, ಹಾಗೆಯೇ ಕರ್ಮದಲ್ಲಿ ಬರುವ ವೇಳೆಗೆ ಮುಕ್ಕಾಲುಭಾಗ ಕಡಿಮೆ ಆಗುತ್ತದೆ, ಹೀಗೆ ಕಲಬೆರಕೆ ಆಗಿಬಿಡುತ್ತದೆ. ಇದಕ್ಕೆ ಕಾರಣ ಏನು? ಕಾರಣ ಸಂಕಲ್ಪದಲ್ಲಿ ಏಕಾಗ್ರತೆ ಹಾಗೂ ಧೃಡತೆ ಇಲ್ಲದಿರುವುದಾಗಿದೆ. ಒಂದುವೇಳೆ ಸಂಕಲ್ಪದಲ್ಲಿ ಏಕಾಗ್ರತೆ ಇದ್ದಾಗ ಆ ಏಕಾಗ್ರತೆಯು ಸಫಲತೆಗೆ ಸಾಧನವಾಗಿದೆ. ಧೃಡತೆಯು ಸಫಲತೆಗೆ ಸಾಧನವಾಗಿದೆ ಆದರೆ ಈ ಎರಡರಲ್ಲೂ ಅಂತರವಾಗಿಬಿಡುತ್ತದೆ, ಇದಕ್ಕೆ ಕಾರಣವೇನು? ಆ ಕಾರಣವನ್ನು ಒಂದೇ ಮಾತಿನಲ್ಲಿ ಬಾಪ್‌ದಾದಾ ಫಲಿತಾಂಶವನ್ನು ನೋಡುತ್ತಾರೆ, ಮಕ್ಕಳು ಅನ್ಯರನ್ನು ಹೆಚ್ಚಾಗಿ ನೋಡುತ್ತಾರೆ. ನೀವೂ ಸಹ ಈ ರೀತಿ ಹೇಳುತ್ತೀರಲ್ಲವೇ..., ಇವರು ಹೀಗೆ ಮಾಡುತ್ತಾರೆ, ಆಗ ಒಂದುಬೆರಳು ಅವರಕಡೆ ಇದ್ದು ಇನ್ನುಳಿದ ನಾಲ್ಕು ಬೆರಳು ಸ್ವಯಂನ ಕಡೆ ಇರುತ್ತದೆ. ಆಗ ನಾಲ್ಕು ಬೆರಳನ್ನು (ಸ್ವಯಂನ್ನು) ನೋಡುವುದಿಲ್ಲ, ಒಂದು ಬೆರಳನ್ನು (ಅನ್ಯರನ್ನು) ತುಂಬಾ ನೋಡುತ್ತಾರೆ. ಆದ್ದರಿಂದ ಧೃಡತೆ ಹಾಗೂ ಏಕಾಗ್ರತೆ, ಏಕತೆಯು ಅಲುಗಾಡಿಬಿಡುತ್ತದೆ. ಇದನ್ನು

ಅವರು ಮಾಡಲಿ, ಆಗ ನಾನು ಮಾಡುತ್ತೇನೆ. ಇಲ್ಲಿ ಸ್ವಯಂನ್ನು ಎರಡನೇ ನಂಬರಿನವರನ್ನಾಗಿ ಮಾಡಿಕೊಳ್ಳುತ್ತಾರೆ ಮಾಡುತ್ತಾರೆ, ಅನ್ಯರನ್ನು ಮೊದಲ ನಂಬರಿನವರನ್ನಾಗಿ ಮಾಡಿಬಿಡುತ್ತಾರೆ. ಇಲ್ಲವೆಂದರೆ ತಮ್ಮ ಸ್ಲೋಗನ್ನನ್ನು ಪರಿವರ್ತನೆ ಮಾಡಿಕೊಳ್ಳಿರಿ. ಸ್ವ ಪರಿವರ್ತನೆಯಿಂದ ವಿಶ್ವಪರಿವರ್ತನೆ ಬದಲಾಗಿ ವಿಶ್ವಪರಿವರ್ತನೆಯಿಂದ ಸ್ವ ಪರಿವರ್ತನೆ ಎಂದು ಬದಲಾಯಿಸಿಕೊಳ್ಳಿರಿ. ಅನ್ಯರ ಪರಿವರ್ತನೆಯಿಂದ ಸ್ವಯಂನ ಪರಿವರ್ತನೆ. ಪರಿವರ್ತನೆ ಮಾಡೋಣವೇ? ಪರಿವರ್ತನೆ ಮಾಡೋಣವೇ? ಮಾಡುವುದು ಬೇಡ...? ಆದರೆ ಅದಕ್ಕಾಗಿ ಬಾಪ್‌ದಾದಾರವರೂ ಸಹ ಒಂದು ನಿಬಂಧನೆಯನ್ನು (ಕಂಡೀಷನ್) ಹಾಕುತ್ತಾರೆ, ನಿಮಗೆ ಇಷ್ಟವೇ ತಾನೇ! ತಿಳಿಸಿಕೊಡೋಣವೇ? ಬಾಪ್‌ದಾದಾರವರು 6 ತಿಂಗಳಿನ ಫಲಿತಾಂಶವನ್ನು ನೋಡುತ್ತಾರೆ ಆಗ ಬರುತ್ತೇವೆ. ಇಲ್ಲವೆಂದರೆ ಬರುವುದಿಲ್ಲ. ಯಾವಾಗ ತಂದೆ ತಮ್ಮ ಮಾತಿಗೆ ಹಾಜಿ ಎಂದು ಹೇಳಿದರೂ ಮಕ್ಕಳೂ ಸಹ ತಂದೆಯ ಮಾತಿಗೆ ಹಾಜಿ ಎಂದು ಹೇಳಬೇಕಲ್ಲವೇ! ಏನೇ ಆಗಿಬಿಡಲಿ, ಬಾಪ್‌ದಾದಾರವರಂತೂ ತಿಳಿಸುತ್ತಾರೆ - ಸ್ವ ಪರಿವರ್ತನೆಗಾಗಿ ಈ ಹದ್ದಿನ ನನ್ನತನದಿಂದ ಸಾಯಬೇಕಾಗುತ್ತದೆ, ನನ್ನತನದಿಂದ ಸಾಯಬೇಕು, ಶರೀರದಿಂದಲ್ಲ. ಶರೀರದಿಂದ ಸಾಯಬಾರದು, ನನ್ನತನದಿಂದ ಸಾಯಬೇಕು. ನಾನು ಸರಿಯಾಗಿ ಇದ್ದೇನೆ, ನಾನು ಈ ರೀತಿ ಇದ್ದೇನೆ, ನಾನೇನು ಕಡಿಮೆ ಇದ್ದೇನೆ, ನಾನೂ ಸಹ ಎಲ್ಲಾ ಆಗಿದ್ದೇನೆ, ಈ ನನ್ನತನದಿಂದ ಸಾಯಬೇಕು. ಆದ್ದರಿಂದ ಸಾಯಬೇಕಾಗುತ್ತದೆಯಲ್ಲವೇ. ಈ ಮೃತ್ಯು ಬಹಳ ಮಧುರವಾದ ಮೃತ್ಯುವಾಗಿದೆ. ಇದು ಸಾಯುವುದು ಅಲ್ಲ, 21 ಜನ್ಮಗಳ ರಾಜ್ಯಭಾಗ್ಯದಲ್ಲಿ ಬದುಕುವುದಾಗಿದೆ. ಹಾಗಾದರೆ ಇಷ್ಟವಿದೆಯಲ್ಲವೇ? ನಿಮಿತ್ತ ಟೀಚರ್ಸ್‌ಗೆ ಇಷ್ಟವಿದೆಯಲ್ಲವೇ? ಡಬಲ್ ವಿದೇಶಿಯರಿಗೆ? ಡಬಲ್ ವಿದೇಶಿಯರೂ ಸಹ ಯಾವ ಸಂಕಲ್ಪವನ್ನು ಮಾಡುತ್ತಾರೆಯೋ ಅದನ್ನು ಮಾಡುವುದರಲ್ಲಿ ಧೈರ್ಯವಿಡುತ್ತಾರೆ. ಅದು ಅವರ ವಿಶೇಷತೆ ಆಗಿದೆ ಹಾಗೂ ಭಾರತವಾಸಿಯರು ಮೂರುಪಟ್ಟು (ಟ್ರಿಬಲ್) ಧೈರ್ಯ ಮಾಡುವರಾಗಿದ್ದಾರೆ, ಅವರು ಡಬಲ್ ಆದರೆ ಇವರು ಟ್ರಿಬಲ್. ಆದ್ದರಿಂದ ಬಾಪ್‌ದಾದಾರವರೂ ಸಹ ಇದನ್ನೇ ನೋಡಲು ಇಷ್ಟಪಡುತ್ತಾರೆ. ತಿಳಿಯಿತಲ್ಲವೇ! ಇದೇ ಬಾಪ್‌ದಾದಾರವರ ಆಶಾದೀಪ, ಪ್ರತಿಯೊಂದು ಮಗುವಿನ ಆಂತರ್ಯದಲ್ಲಿ ಬೆಳಗಿರುವುದನ್ನು ನೋಡಲು ಇಷ್ಟಪಡುತ್ತಾರೆ. ಈಗ ಈ ವರ್ಷದಲ್ಲಿ ಇಂತಹ ದೀಪಾವಳಿಯನ್ನು ಆಚರಿಸಿರಿ. ಭಲೇ 6 ತಿಂಗಳ ನಂತರವೇ ಆಚರಿಸಿ. ಯಾವಾಗ ಬಾಪ್‌ದಾದಾ ಇಂತಹ ದೀಪಾವಳಿಯ ಸಮಾರೋಹವನ್ನು ನೋಡುತ್ತಾರೆಯೋ ಆಗ ತಮ್ಮ ಆಗಮನದ ಪ್ರೋಗ್ರಾಂನ್ನು ಕೊಡುತ್ತಾರೆ. ಮಾಡಲೇಬೇಕಾಗುವುದು. ನೀವು ಮಾಡದೇ, ಹಿಂದೆ ಇರುವವರು ಮಾಡುತ್ತಾರೇಯೇ! 16,108ರ ನಿಮ್ಮ ಮಾಲೆಯಲ್ಲಿ ನೀವು ಹಳೆಯ ಮಕ್ಕಳೇ ಬರಬೇಕಾಗಿದೆ. ಹೊಸ ಮಕ್ಕಳಂತೂ ಹಿಂದೆ-ಹಿಂದೆ ಬರುತ್ತಾರೆ. ಹಾ! ಕೆಲವು-ಕೆಲವರು ಲಾಸ್ಟ್ ಸೋ ಫಸ್ಟ್ನಲ್ಲಿ ಬರುತ್ತಾರೆ. ಕೆಲ ಕೆಲವರು ಲಾಸ್ಟ್ ಸೋ ಫಸ್ಟ್ನಲ್ಲಿ ಬರುವಂತೆ ಮಾದರಿ ಆಗಿದ್ದಾರೆ ಆದ್ದರಿಂದ ಫಸ್ಟ್ ಬರುತ್ತಾರೆ. ಆದರೆ ಬಹಳ ಕಡಿಮೆ. ಆಗ ಉಳಿದವರು ನೀವೇ ಆಗಿದ್ದೀರಿ. ನೀವೇ ಪ್ರತಿ ಕಲ್ಪದಲ್ಲಿ ಆಗಿದ್ದೀರಿ ಈಗ ನೀವೇ ಆಗಬೇಕಾಗಿದೆ. ಒಂದುವೇಳೆ ಈಗ ಎಲ್ಲಾದರೂ ಕುಳಿತಿರಬಹುದು, ವಿದೇಶದಲ್ಲಾದರೂ ಕುಳಿತಿರಬಹುದು, ದೇಶದಲ್ಲಾದರೂ ಕುಳಿತಿರಬಹುದು ಆದರೆ ಯಾರು ನಿಮ್ಮಲ್ಲಿ ಬಹಳ ಕಾಲದ ಪಕ್ಕಾ ನಿಶ್ಚಯ ಬುದ್ಧಿವುಳ್ಳವರಾಗಿದ್ದೀರೋ ಅವರು ಅಧಿಕಾರಿ ಆಗಿಯೇ ಇದ್ದಾರೆ. ಬಾಪ್‌ದಾದಾರವರಿಗಂತೂ ಪ್ರೀತಿ ಇದೆಯಲ್ಲವೆ, ಯಾರು ಬಹಳ ಕಾಲದ ಉತ್ತಮ ಪುರುಷಾರ್ಥಿ, ಸಂಪೂರ್ಣ ಪುರುಷಾರ್ಥಿ ಅಲ್ಲ ಆದರೆ ಉತ್ತಮ ಪುರುಷಾರ್ಥಿಯಾಗಿದ್ದಾರೆಯೋ ಅವರನ್ನು ಬಾಪ್‌ದಾದಾ ಬಿಟ್ಟು ಹೋಗುವುದಿಲ್ಲ. ಜೊತೆಯಲ್ಲಿಯೇ ಕರೆದುಕೊಂಡು ಹೋಗುತ್ತಾರೆ. ಆದ್ದರಿಂದ ಈ ಪಕ್ಕಾ

ನಿಶ್ಚಯವನ್ನು ಮಾಡಿಕೊಳ್ಳಿ - ನಾವೇ ಆಗಿದ್ದೆವು, ನಾವೇ ಆಗಿದ್ದೇವೆ, ನಾವೇ ಜೊತೆ ಇರುತ್ತೇವೆ. ಸರಿ ಇದೆಯಲ್ಲವೇ! ಪಕ್ಕಾ ಇದೆಯಲ್ಲವೇ? ಅದಕ್ಕಾಗಿ ಕೇವಲ ಶುಭಚಿಂತಕ, ಶುಭಚಿಂತನೆ, ಶುಭಭಾವನೆ, ಪರಿವರ್ತನೆಯ ಭಾವನೆ, ಸಹಯೋಗ ಕೊಡುವಭಾವನೆ, ದಯಾಭಾವನೆಯನ್ನು ಇಮರ್ಜ್(ಪ್ರತ್ಯಕ್ಷ) ಮಾಡಿಕೊಳ್ಳಿ. ಈಗ ಮರ್ಜ್(ಗುಪ್ತ) ಮಾಡಿ ಇಟ್ಟುಕೊಂಡಿದ್ದೀರಿ ಅದನ್ನು ಪ್ರತ್ಯಕ್ಷ ಮಾಡಿಕೊಳ್ಳಿ. ತುಂಬಾ ಶಿಕ್ಷಣವನ್ನು ಕೊಡಬೇಡಿ, ಕ್ಷಮಿಸಿರಿ. ಶಿಕ್ಷಣ ಕೊಡುವುದರಲ್ಲಿ ಒಬ್ಬರಿಗಿಂತ ಒಬ್ಬರು ಎಲ್ಲರೂ ಬುದ್ಧಿವಂತರಾಗಿದ್ದಾರೆ. ಆದರೆ ಕ್ಷಮೆಯ ಜೊತೆಯಲ್ಲಿ ಶಿಕ್ಷಣವನ್ನು ಕೊಡಿ. ಮುರಳಿ ಹೇಳುವುದರಲ್ಲಿ, ಕೋರ್ಸ್ ಕೊಡುವುದರಲ್ಲಿ ಅಲ್ಲದೇ ತಾವು ಯಾವ ಕಾರ್ಯಕ್ರಮಗಳನ್ನು ಮಾಡುತ್ತೀರೋ ಆ ಕಾರ್ಯಕ್ರಮಗಳಲ್ಲಿ ಶಿಕ್ಷಣವನ್ನು ಕೊಡಿ ಆದರೆ ಯಾವಾಗ ಪರಸ್ಪರ ವ್ಯವಹಾರದಲ್ಲಿ ಬರುತ್ತೀರೋ ಆಗ ಕ್ಷಮೆಯ ಜೊತೆಯಲ್ಲಿ ಶಿಕ್ಷಣವನ್ನು ಕೊಡಿ, ಕೇವಲ ಶಿಕ್ಷಣವನ್ನು ಕೊಡಬೇಡಿ. ದಯಾಹೃದಯಿಯಾಗಿ ಶಿಕ್ಷಣವನ್ನು ಕೊಟ್ಟಾಗ ನಿಮ್ಮ ಕ್ಷಮೆಯೂ ಅನ್ಯರ ಬಲಹೀನತೆಯನ್ನು ಕ್ಷಮಿಸುವಂತಹ ಕೆಲಸ ಮಾಡುತ್ತದೆ. ತಿಳಿಯಿತಲ್ಲವೇ! ಒಳ್ಳೆಯದು. ಬಹಳಷ್ಟು ಜನರು ಬಹಳ ವಿಧವಾದ ಸೇವೆಗಳನ್ನು ಮಾಡಿದ್ದೀರಿ ಮತ್ತು ಈಗಲೂ ಮಾಡುತ್ತಲೇ ಇದ್ದೀರಿ. ಆದರೆ ಬಾಪ್‌ದಾದಾ ಒಂದು ಸೂಚನೆಯನ್ನು ಕೊಡುತ್ತಿದ್ದಾರೆ ಕ್ವಾಂಟಿಟಿ (ಸಂಖ್ಯೆ)ಯನ್ನು ಹೆಚ್ಚಿಸುವ ಮತ್ತು ಕ್ವಾಲಿಟಿ (ಲಕ್ಷಣಗ)ಳನ್ನು ಹೊಂದಿರುವವರ ಸೇವೆ, ಎರಡೂ ವಿಧವಾದ ಸೇವೆಗಳನ್ನು ಮಾಡಿರಿ ಆದರೆ ಲಕ್ಷಣಗಳು ಇರುವವರ ಸೇವೆಗೆ ಸಹ ಸಹಯೋಗಿಯಾಗಿರಿ. ಸೇವಾವೇದಿಕೆಯ ಮೇಲೆ ಲಕ್ಷಣಗಳು ಇರುವವರನ್ನೇ ತನ್ನಿರಿ. ಕ್ವಾಲಿಟಿ ಮತ್ತು ಕ್ವಾಲಿಟಿ ಎರಡು ಸೇವೆಗಳು ಬೇಕು. ಅಷ್ಟೇ ಹೊರತು ಸಂಖೆಯ ಹಿಂದೆ ಬಿದ್ದು ಲಕ್ಷಣಗಳು ಇರುವವರನ್ನು ಮರೆತು ಹೋಗಬೇಡಿರಿ. ಏಕೆಂದರೆ ಸಮಯ ಸಮೀಪವಾಗಿ ಬರುತ್ತಿದೆ. ಲಕ್ಷಣಗಳು ಇರುವವರ ಕಾರ್ಯದ ಮೂಲಕವೇ ತಂದೆಯ ಪ್ರತ್ಯಕ್ಷತೆ ಆಗುತ್ತದೆ. ಸಂದೇಶ ಕೊಡುವುದು ಸಹ ಅವಶ್ಯಕವಾಗಿದೆ. ಸಂದೇಶವಾಹಕರಾಗುವುದು ಸಹ ಅವಶ್ಯಕವಾಗಿದೆ.

ಒಳ್ಳೆಯದು, ಈಗ ಕೇಳುವುದು ಎಂದರೆ ನಿಭಾಯಿಸುವುದು ನಿಭಾಯಿಸುವುದು ಎಂದರೆ ಸ್ವರೂಪದಲ್ಲಿ ತರುವುದು. ಈಗ 6 ಲಕ್ಷದ ಬ್ರಾಹ್ಮಣ ಪರಿವಾರದವರೆಲ್ಲರೂ ಒಬ್ಬರನ್ನೊಬ್ಬರು ಸದಾ ಸ್ನೇಹಿಯನ್ನಾಗಿ, ಸಹಯೋಗಿಯನ್ನಾಗಿ ಮತ್ತು ಸದಾ ಧೈರ್ಯವನ್ನು ಹೆಚ್ಚಿಸಿಕೊಳ್ಳುವವರಾಗಿರಬೇಕು.

ಈಗ ಒಂದು ಸೆಕೆಂಡಿನಲ್ಲಿ ಮನಸ್ಸಿನ ಮಾಲೀಕರಾಗುವ, ಮನಸ್ಸನ್ನು ಎಷ್ಟು ಸಮಯಬೇಕೋ ಅಷ್ಟೂ ಸಮಯ ಏಕಾಗ್ರ ಮಾಡಲು ಸಾಧ್ಯವೇ? ಮಾಡಬಲ್ಲಿರಾ? ಅಂದಾಗ ಈಗ ಈ ಆತ್ಮಿಕ ವ್ಯಾಯಾಮ ಮಾಡಿ - ಸಂಪೂರ್ಣ ಮನಸ್ಸಿನ ಏಕಾಗ್ರತೆಯಿರಲಿ, ಅದು ಸಂಕಲ್ಪದಲ್ಲಿಯೂ ಏರುಪೇರಿಲ್ಲದೇ ಅಚಲವಾಗಿರಬೇಕು, ಒಳ್ಳೆಯದು.

**ನಾಲ್ಕಾರೂ ಕಡೆಯ ಸರ್ವ ಅವಿನಾಶಿ, ಅಖಂಡ ಖಜಾನೆಗಳ ಮಾಲೀಕರು, ಸದಾ ಸಂಗಮಯುಗೀ ಶ್ರೇಷ್ಠ ಬಂಧನಮುಕ್ತ, ಜೀವನ್ಮುಕ್ತಸ್ಥಿತಿಯಲ್ಲಿ ಸ್ಥಿತರಾಗಿರುವವರು, ಸದಾ ಬಾಪ್‌ದಾದಾರವರ ಆಸೆಗಳನ್ನು ಸಂಪನ್ನ ಮಾಡಿರುವವರು, ಸದಾ ಏಕತೆ ಮತ್ತು ಏಕಾಗ್ರತೆಯ ಶಕ್ತಿ ಸಂಪನ್ನ ಮಾಸ್ಟರ್ ಸರ್ವಶಕ್ತಿವಂತ ಆತ್ಮರಿಗೆ ಬಾಪ್‌ದಾದಾರವರ ನೆನಪು, ಪ್ರೀತಿ, ಹಾಗೂ ನಮಸ್ತೆ.**

ನಾಲ್ಕಾರು ಕಡೆಯ ದೂರ ಕುಳಿತಿರುವ ಮಕ್ಕಳಿಗೆ, ಯಾರು ನೆನಪು-ಪ್ರೀತಿಯನ್ನು ಕಳುಹಿಸಿದ್ದೀರಿ, ಪತ್ರವನ್ನು ಕಳುಹಿಸಿದ್ದೀರಿ, ಅವರಿಗೆ ಬಾಪ್‌ದಾದಾ ಬಹಳ ಬಹಳ ಹೃದಯದ ಪ್ರೀತಿಯ ಸಹಿತ ನೆನಪು -ಪ್ರೀತಿಯನ್ನು ಕೊಡುತ್ತಿದ್ದಾರೆ. ಜೊತೆ ಜೊತೆಯಲ್ಲಿ ಅನೇಕ ಮಕ್ಕಳು ಮಧುಬನದ ರಿಫ್ರೇಶ್ಮೆಂಟ್ನ ಪತ್ರಗಳನ್ನು ಬಹಳ ಚೆನ್ನಾಗಿ ಕಳುಹಿಸಿದ್ದೀರಿ, ಆ ಮಕ್ಕಳಿಗೂ ವಿಶೇಷ ನೆನಪು, ಪ್ರೀತಿ ಮತ್ತು ನಮಸ್ತೆ.

ರಿವೈಸ್ ಕೋರ್ಸ್ 20-03-2004.
***ಈ ವರ್ಷವನ್ನು ವಿಶೇಷ ಜೀವನ್ಮುಕ್ತ ವರ್ಷವನ್ನಾಗಿ ಆಚರಿಸಿಕೊಳ್ಳಿರಿ. ಏಕತೆ ಮತ್ತು ಏಕಾಗ್ರತೆಯ ಮೂಲಕ ತಂದೆಯನ್ನು ಪ್ರತ್ಯಕ್ಷ ಮಾಡಿರಿ.***

ಈ ಜ್ಞಾನ ಖಜಾನೆಯನ್ನು ಪ್ರತ್ಯಕ್ಷ ಜೀವನದಲ್ಲಿ ಪ್ರತಿಯೊಂದು ಕಾರ್ಯದಲ್ಲಿ ಉಪಯೋಗಿಸುವುದರ ಮೂಲಕ, ವಿಧಿಯ ಮೂಲಕ ಸಿದ್ಧಿಯು ಲಭಿಸುತ್ತದೆ. ಕೆಲವು ಬಂಧನಗಳಿಂದ ಮುಕ್ತಿ, ಜೀವನ್ಮುಕ್ತಿ ಲಭಿಸುತ್ತದೆ. ನೀವು ಬಂಧನ ಮುಕ್ತರಾಗುವುದರ ಮೂಲಕ ಸರ್ವಾತ್ಮರಿಗಾಗಿ ಮುಕ್ತಿಯ ದ್ವಾರವನ್ನು ತೆಗೆಯಬಲ್ಲಿರಿ. ದ್ವಾರವನ್ನು ತೆಗೆಯುವ ಮತ್ತು ಸರ್ವಾತ್ಮರಿಗೆ ದುಃಖ, ಅಶಾಂತಿಯಿಂದ ಮುಕ್ತ ಮಾಡುವ ಜವಾಬ್ದಾರಿ ನಿಮ್ಮ ಮೇಲೆ ಇದೆ. ದೃಢತೆ, ಏಕಾಗ್ರತೆ, ಏಕತೆ ಇರುತ್ತಿಲ್ಲ. ಅವರು ಮಾಡಿದರೆ ನಾನು ಮಾಡುತ್ತೇನೆ ಹೀಗೆ ಎರಡನೇ ನಂಬರಿನವರಾಗಿ ಬಿಡುತ್ತಿದ್ದೀರಿ. ಪ್ರತಿಯೊಂದು ಕಲ್ಪ ನೀವೇ ತಯಾರಾಗಿದ್ದೀರಿ. ನೀವೇ ತಯಾರಾಗಬೇಕು. ಯಾರಾದರೆ ಬಹಳ ಸಮಯ ಪಕ್ಕಾ ನಿಶ್ಚಯ ಬುದ್ಧಿಯಿಂದ ಇರುತ್ತಾರೆಯೋ ಅವರು ತಪ್ಪದೇ ಅಧಿಕಾರಿಗಳಾಗುತ್ತಾರೆ. ಎನ್ನುತ್ತಾ ಸ್ನೇಹ ಸಾಗರನಾದ ತನ್ನ ಸ್ನೇಹಿ ಮಕ್ಕಳೊಂದಿಗೆ ಮಾತನಾಡುತ್ತಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿ ಇರುತ್ತಾ ಮನನ ಚಿಂತನೆ ಮಾಡಬೇಕಾಗಿರುವ ಸಮರ್ಥ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**
ನಾನು ಆತ್ಮ ಸುಖ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ಭಾಗ್ಯವನ್ ಆತ್ಮನಾದ ನಾನು ಪರಮಾತ್ಮನ ಸ್ನೇಹಕ್ಕೆ, ಪ್ರೀತಿಗೆ ಪಾತ್ರನಾಗಿದ್ದೇನೆ.

2. ನನಗೆ ಸರ್ವಖಜಾನೆಗಳು ಒಂದು ಜನ್ಮಕ್ಕಾಗಿ ಅಲ್ಲ, ಅನೇಕ ಜನ್ಮಗಳವರೆಗೆ ಅವಿನಾಶಿಯಾಗಿ ನನ್ನ ಜೊತೆ ಇವೆ ಎಂಬ ಪ್ರಾಪ್ತಿಯ, ಜಮಾದ ನಶೆ, ಜಮಾದ ಖುಷಿ ಸದಾ ಇದೆ.

3. ನಾನು ಅಖಂಡವಾದ, ಅವಿನಾಶಿ ಖಜಾನೆಗಳಿಗೆ ಮಾಲೀಕನು.

4. ನಾನು ಬುದ್ಧಿವಂತನಾಗಿ, ಜ್ಞಾನ ಪೂರ್ಣನಾಗಿ, ತ್ರಿಕಾಲ ದರ್ಶಿಯಾಗಿ ಜ್ಞಾನ ಧನವನ್ನು ಪ್ರತ್ಯಕ್ಷ ಜೀವನದಲ್ಲಿ ಪ್ರತಿಯೊಂದು ಕಾರ್ಯದಲ್ಲಿ ಉಪಯೋಗಿಸಿ ವಿಧಿಯ ಮೂಲಕ ಸಿದ್ಧಿಯನ್ನು ಪಡೆದಿದ್ದೇನೆ, ಬಂಧನ್ ಮುಕ್ತನಾಗಿ ಜೀವನ್ಮುಕ್ತನಾಗಿದ್ದೇನೆ.

5. ನಾನು ಸ್ವಯಂ ಬಂಧನ್ ಮುಕ್ತನಾಗಿ ಸರ್ವಾತ್ಮರಿಗಾಗಿ ಮುಕ್ತಿಯ ದ್ವಾರವನ್ನು ತೆರೆದಿದ್ದೇನೆ. ಮತ್ತು ದುಃಖ, ಅಶಾಂತಿಯಿಂದ ಮುಕ್ತರನ್ನಾಗಿ ಮಾಡುವ ಜವಾಬ್ದಾರಿಯನ್ನು ನಿಭಾಯಿಸಿದ್ದೇನೆ.

6. ನಾನು ತಂದೆಗೆ ಆದಿಯಿಂದ ಅಂತಿಮದವರೆಗೆ ಜೊತೆಗಾರನಾಗಿದ್ದೇನೆ.

7. ನಾನು ಬಾಪ್‌ದಾದಾರವರ ಹೃದಯದ ಆಸೆಗಳನ್ನು ಸಂಪನ್ನ ಮಾಡುವ ಆಶಾದೀಪವಾಗಿದ್ದೇನೆ.

8. ಕಲ್ಯಾಣಕಾರಿಯಾದ ನಾನು ಸ್ವಯಂನ ಪರಿವರ್ತನೆಯ ಮೂಲಕ ಸರ್ವರನ್ನು ಪರಿವರ್ತನೆ ಮಾಡಿ ಬ್ರಹ್ಮಾತಂದೆಯ ಸಮಾನವಾಗಿ (ಅರ್ಜುನನಾಗಿ) ನಂಬರ್ ವನ್ ಆಗಿದ್ದೇನೆ, ರಾಯಲ್ ರೂಪದ ನಾನು ಎಂಬುದರಿಂದ ಮುಕ್ತನಾಗಿದ್ದೇನೆ.

9. ನಾನು ಬ್ರಹ್ಮಾ ತಂದೆಯ ಸಮಾನವಾಗಿ ಬಂಧನ ಮುಕ್ತನಾಗಿ ಜೀವನ ಮುಕ್ತನಾಗುವ ಬಾಪ್ ಸಮಾನ ಸ್ವರೂಪ.

10. ನಾನು ಸಮಾಧಾನ ಸ್ವರೂಪವಾಗಿದ್ದೇನೆ ಮತ್ತು ಸಹಯೋಗಿಗಳನ್ನು ಸಹ ತಯಾರು ಮಾಡಿದ್ದೇನೆ.

11. ನಾನು ವಿಶ್ವದಲ್ಲಿ ತಂದೆಯ ಪ್ರತ್ಯಕ್ಷತೆಯ ಧ್ವಜವನ್ನು ಹಾರಿಸುವ ಮೊದಲು ನನ್ನ ಮನಸ್ಸಿನಲ್ಲಿ ಅಥವಾ ಹೃದಯ ಸಿಂಹಾಸನದಲ್ಲಿ ತಂದೆಯ ಧ್ವಜವನ್ನು ಹಾರಿಸಿದ್ದೇನೆ.

12. ನಾನು ಸರ್ವರ ಸಂಬಂಧ ಸಂಪರ್ಕದಲ್ಲಿ ಅನೇಕತೆಯಲ್ಲಿ (ಅನೇಕ ಸಂಸ್ಕಾರಗಳು) ಏಕತೆಯಿಂದ ಇದ್ದೇನೆ, ನಾನು ಯಾವ ಶ್ರೇಷ್ಠ ಸಂಕಲ್ಪವನ್ನಾದರೆ ಮಾಡುತ್ತಿದ್ದೇನೆಯೋ, ಆ ಸಂಕಲ್ಪದಲ್ಲಿ ಏಕಾಗ್ರತೆ, ದೃಢತೆಯ ಮೂಲಕ ಕರ್ಮದಲ್ಲಿ (ಕೇವಲ ಮನಸ್ಸು, ಬುದ್ಧಿಯವರೆಗೆ ಮಾತ್ರವಲ್ಲದೆ) ತಂದು ಸಫಲತೆಯನ್ನು ಪಡೆಯುವ ಮೊದಲ ನಂಬರ್ ವಿದ್ಯಾರ್ಥಿಯಾಗಿದ್ದೇನೆ.

13. ಹದ್ದಿನ ನಾನು ನನ್ನದು ಎಂಬುದರಿಂದ ಸಾಯುವುದು (ನಾನು ಸತ್ಯ, ನಾನು ಇದು, ನಾನೇನು ಕಡಿಮೆ) ಎಂಬುವುದು ಸಾಯುವುದಲ್ಲ 21 ಜನ್ಮಗಳ ರಾಜ್ಯ ಭಾಗ್ಯದಿಂದ ಜೀವಿಸುವುದು ಎಂದು ನಾನು ಅಂಗೀಕರಿಸಿದ್ದೇನೆ.

14. ನಾನು ಬಹಳ ಸಮಯ ನಿಶ್ಚಯ ಬುದ್ಧಿಯಿಂದ ಇರುವ ಅಧಿಕಾರಿಯಾಗಿದ್ದೇನೆ.

15. ನಾನು ಶುಭ ಚಿಂತಕನಾಗಿ, ಶುಭ ಚಿಂತನೆಯಿಂದ, ಶುಭ ಭಾವನೆ, ಪರಿವರ್ತನೆಯ ಸಹಯೋಗವನ್ನು ಕೊಡುವ ಭಾವನೆ, ದಯಾ ಹೃದಯದ ಭಾವನೆಗಳನ್ನು ಪ್ರತ್ಯಕ್ಷ ಮಾಡಿ ಪರಸ್ಪರ ಕಾರ್ಯ ವ್ಯವಹಾರದಲ್ಲಿ ಶ್ರಮದಿಂದ ಶಿಕ್ಷಣವನ್ನು ಕೊಡುತ್ತಿದ್ದೇನೆ.

16. ನಾನು ಸಂಖ್ಯೆ(ಕ್ವಾಂಟಿಟಿ)ಯನ್ನು ಹೆಚ್ಚಿಸುವ ಸೇವೆಯೊಂದಿಗೆ ಲಕ್ಷಣಗಳು(ಕ್ವಾಲಿಟಿ) ಇರುವವರ ಸೇವೆಗೂ ಸಹಯೋಗಿ ಆಗಿದ್ದೇನೆ.

17. ನಾನು ಕೇಳುವುದು ಎಂದರೆ ಅದನ್ನು ತುಂಬಿಕೊಂಡು ಸ್ವರೂಪದಲ್ಲಿ ತಂದಿದ್ದೇನೆ.

18. ನಾವು ಬ್ರಾಹ್ಮಣ ಪರಿವಾರದಲ್ಲಿ ಒಬ್ಬರನ್ನೊಬ್ಬರು ಸ್ನೇಹಿಯಾಗಿ ಮತ್ತು ಧೈರ್ಯವನ್ನು ಹೆಚ್ಚಿಸಿಕೊಳ್ಳುವವರಾಗಿ ಇದ್ದೇವೆ.

19. ನಾನು ಒಂದು ಕ್ಷಣದಲ್ಲಿ ಮನಸ್ಸಿಗೆ ಮಾಲಿಕನಾಗಿ ಮನಸ್ಸನ್ನು ಎಷ್ಟು ಸಮಯ ಬೇಕೆಂದರೆ ಅಷ್ಟು ಸಮಯ ಏಕಾಗ್ರ ಮಾಡುವ ಆತ್ಮಿಕ ವ್ಯಾಯಾಮವನ್ನು ಮಾಡುತ್ತಿದ್ದೇನೆ.